# ಭಾರತೀಯ ಜನತಾ ಪಾರ್ಟಿ

## ಕೇಂದ್ರ ಕಚೇರಿ

## 11, ಅಶೋಕ ರಸ್ತೆ, ನವದೆಹಲಿ–110001

**Phone-011-23005700, Fax-011-23005787**


ದಿನಾಂಕ: ಫೆಬ್ರವರಿ 13,2013

**ರಾಜ್ಯಸಭಾ ವಿರೋಧ ಪಕ್ಷದ ಉಪ ನಾಯಕ ಹಾಗೂ ಭಾಜಪ ಪ್ರಧಾನ ವಕ್ತಾರ**

**ಶ್ರೀ ರವಿ ಶಂಕರ್ ಪ್ರಸಾದ್ ಅವರು ನೀಡಿದ ಪತ್ರಿಕಾ ಪ್ರಕಟಣೆ**

**ಮತ್ತೊಂದು ಹಗರಣ– ಯುಪಿಎ: ಸ್ವತಂತ್ರ್ಯಾ ನಂತರದ ಅತಿ ಭ್ರಷ್ಟ ಸರ್ಕಾರ**

ಇಟಲಿಯ ರಕ್ಷಣಾ ಉತ್ಪನ್ನಗಳ ಕಂಪನಿ ಫಿನ್‌ಮೆಕಾನಿಕಾ ಎಂಬ ಸಂಸ್ಥೆ ಭಾರತಕ್ಕೆ ಅಗಸ್ಟಾವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಮಾರುವಾಗ, ಒಟ್ಟು 3546 ಕೋಟಿ ರೂಪಾಯಿ ವಹಿವಾಟು ಕುದುರಿಸಲು, ಭಾರತೀಯ ಸಂಜಾತರಿಗೆ 350 ಕೋಟಿ ರೂಪಾಯಿ ಲಂಚ ನೀಡಿರುವ ವಿಚಾರ ಸಾರ್ವಜನಿಕ ವಲಯದಲ್ಲಿ ಕಳೆದ ಒಂದು ವರ್ಷದಿಂದ ಚರ್ಚೆಗೆ ಗ್ರಾಸವಾಗಿದ್ದರೂ ಈ ಅವ್ಯವಹಾರದ ತನಿಖೆ ನಡೆಸಲು ಸರ್ಕಾರ ಯಾವುದೇ ಅಸಕ್ತಿ ವಹಿಸದೆ ಇದದ್ದು ಅತೀವ ವಿಶಾದದ ಸಂಗತಿಯಾಗಿದೆ. ಖರೀದಿ ನಿಯಮದ ಅನುಸಾರ ಕಮಿಶನ್ ನೀಡುವುದು ಬಹು ದೊಡ್ಡ ಅಪರಾಧವಾಗಿದ್ದು, ಈ ಹಿನ್ನಲೆಯಲ್ಲಿ ಕೆಳಕಂಡ ವಿಚಾರಗಳು ಪ್ರಮುಖ್ಯತೆ ಹೊಂದಿವೆ:–

1. ಈ ವ್ಯವಹಾರದಲ್ಲಿ ಒಪ್ಪಂದವನ್ನು 2007ನೇ ಇಸವಿಯಲ್ಲಿ ಅಂತಿಮಗೊಳಿಸಬೇಕಿತ್ತು ಮತ್ತು ಗುತ್ತಿಗೆ ನೀಡುವ ಕಾಂಟ್ರ್ಯಾಕ್ಟ್ ಸಹಿಯಾಗಬೇಕಿದ್ದದ್ದು ಫೆಬ್ರವರಿ 2010ರಲ್ಲಿ.

2. ಕಳೆದ ಒಂದು ವರ್ಷದಿಂದ ಈ ವ್ಯವಹಾರ ಕುರಿತು ಇಟಲಿಯಲ್ಲಿ ಭ್ರಷ್ಟಾಚಾರದ ಕೂಗು ಎದ್ದ ಬಳಿಕ, ಗಂಭೀರ ಸ್ವರೂಪದ ಪ್ರಶ್ನೆಗಳನ್ನು ನಮ್ಮ ಪತ್ರಿಕಾ ಮಾಧ್ಯಮಗಳು, ಅದರಲ್ಲೂ ವಿಷೇಶವಾಗಿ "ದಿ ಇಂಡಿಯನ್ ಎಕ್ಸಪ್ರೆಸ್" ಎತ್ತಿದ್ದವು.

3. ಭಾರತೀಯ ಮಧ್ಯಮವರ್ತಿಗಳು ಹಾಗೂ ಮಾಜಿ ವಾಯು ಪಡೆ ಮುಖ್ಯಸ್ಥರ ನಿಕಟವರ್ತಿಗಳು ಈ ಅವ್ಯವಹಾರದಲ್ಲಿ ಶಾಮೀಲಾಗಿರುವ ಹಲವಾರು ವರದಿಗಳು ಹೊರಬಂದಿವೆ. ಸುದ್ದಿ ವಾಹಿನಿ 'ಟೈಮ್ಸ್ ನೌ' ಸಹ ಸವಿಸ್ತಾರವಾದ ಸಂಶೋಧನೆಯ ನಂತರ ಮಾರ್ಚ 27 2012ರಂದು ವರದಿ ಪ್ರಸಾರ ಮಾಡಿತ್ತು. ಈ ವರದಿಯಂತೆ, ದೆಹಲಿ ಪೋಲಿಸ್‌ಗೆ ಹೆಲಿಕಾಪ್ಟರ್ ಮಾರಾಟ ಮಾಡಲು ಅಗಸ್ಟಾವೆಸ್ಟ್‌ಲ್ಯಾಂಡ್‌ನ ಮಾಲಿಕರು ಗೆಂಟಾನ್ ನಿಯಮಿತದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಶೇಕಡ 8 ರಿಂದ 15ರ ಕಮಿಶನ್ ನೀಡಲು ಒಪ್ಪಿರುವ ಸಂಗತಿ ಬಹಿರಂಗಗೊಂಡಿದೆ. ಹೆಲಿಕಾಪ್ಟರ್ ಮಾರಾಟ ಸಂಸ್ಥೆಯು ಲಂಚ ನೀಡಬಯಸಿದ ಸಂಗತಿ ಇದರಿಂದ ದೃಡಪಟ್ಟಿದ್ದು, ಭ್ರಷ್ಟಾಚಾರದ ಆರೋಪಗಳಲ್ಲಿ ಹುರುಳಿರುವ ಕಾರಣ ಇದರ ಕೂಲಂಕುಶ ತನಿಖೆಗೆ ಸರ್ಕಾರ ಆದೇಶ ನೀಡಬೇಕು.

4. ಈ ಎಲ್ಲಾ ವಿಚಾರಗಳ ಹಿನ್ನಲೆಯಲ್ಲಿ ಆರೋಪಗಳ ತನಿಖೆಗೆ ಆದೇಶ ನೀಡಲು ಸರ್ಕಾರ ಮುಂದಾಗದೆಯಿರಲು ಕಾರಣವೇನು. ರಕ್ಷಣಾ ಖಾತೆ ಸಚಿವರಾದ ಶ್ರೀ ಆಂಥಣಿ ಅವರು ಈ ವ್ಯವಹಾರದಲ್ಲಿ ಯಾವುದೇ ತಪ್ಪುಗಳಾಗಿಲ್ಲವೆಂದು ಸಂಸತ್‌ನಲ್ಲಿ ಹೇಳಿಕೆ ನೀಡಿದ್ದು ಏಕೆ?

5. ಅದೇ ಇನ್ನೊಂದೆಡೆ ಇಟಲಿ ರಾಷ್ಟ್ರದ ತನಿಖಾ ಸಂಸ್ಥೆಗಳು ಫಿನ್‌ಮೆಕಾನಿಕಾ ಸಂಸ್ಥೆಯ ವಿರುದ್ಧ ಉದ್ಭವಿಸಿದ ಆರೋಪಗಳ ತನಿಖೆ ನಡೆಸಿ, ಭಾರತಕ್ಕೆ ಹೆಲಿಕಾಪ್ಟರ್ ಮಾರಾಟ ಮಾಡುವ ವಹಿವಾಟಿನಲ್ಲಿ ಹಣ ಕೈ ಬದಲಾಗಿದೆ ಎಂಬ ಆರೋಪದ ಮೇಲೆ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಸೆರೆಹಿಡಿದಿದ್ದಾರೆ.

6. ಈ ಅವ್ಯವಹಾರ ಕುರಿತು ಇಟಲಿಯಿಂದ ಯಾವುದೇ ಅಧಿಕೃತ ಮಾಹಿತಿ ದೊರೆತಿಲ್ಲ ಎಂಬ ಭಾರತ ಸರ್ಕಾರದ ಹೇಳಿಕೆ ಒಪ್ಪತಕ್ಕದ್ದಲ್ಲ. ಇದಕ್ಕೆ ಕೆಳಕಂಡ ಕಾರಣಗಳಿವೆ:–

ಅ. ಮಾಹಿತಿ ಕೋರಲು ನಮ್ಮ ಸರ್ಕಾರ ಇಟಲಿ ಸರ್ಕಾರದ ಉನ್ನತ ಮಟ್ಟದಲ್ಲಿ ಪ್ರಯತ್ನ ನಡೆಸಿದೆಯೇ?

ಆ. ಇಟಲಿ ರಾಯಭಾರಿಯನ್ನು ಕರೆಸಿ, ತುರ್ತಾದ ವಿಚಾರದಲ್ಲಿ ಮಾಹಿತಿ ನೀಡುವಂತೆ ಆಗ್ರಹಿಸಲಾಗಿದೆಯೇ?

ಇ. ನಮ್ಮ ರಕ್ಷಣಾ ಸಚಿವಾಲಯ ತನ್ನ ಅಧಿಕಾರಿಗಳನ್ನು ಇಟಲಿಗೆ ಕಳಿಸಿ ಮಾಹಿತಿ ಪಡೆಯುವ ಯತ್ನಗಳು ನಡೆದಿವೆಯೇ?

7. ಸಂಸ್ಥೆಯ ಮೂಲ ದೇಶವಾದ ಇಟಲಿಯು ಲಂಚ ಪ್ರಕರಣದ ವಿಸ್ತೃತ ತನಿಖೆಗೆ ಆದೇಶ ನೀಡಿರುವಾಗ, ಅರಿಯದ ಕಾರಣಗಳಿಗೆ, ಇಲ್ಲಿ ಕೆಲವರು ಬೇಕೆಂತಲೆ ಈ ವಿಚಾರದಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದೆನಿಸುತ್ತದೆ.

8. ಈ ಸಂಶಯಾಸ್ಪದ ವಿಳಂಬಕ್ಕೆ ಇಟಲಿಯಲ್ಲಿರುವ ಸಂಪರ್ಕ ವ್ಯಕ್ತಿಗಳು ಕಾರಣವೇ ಎಂಬ ಸಮಂಜಸವಾದ ಪ್ರಶ್ನೆ ಉದ್ಭವಿಸುತ್ತದೆ. ಬೋಫರ್ಸ್ ಪ್ರಕರಣದಲ್ಲಿ ಕೊಟ್ರೋಚಿಯನ್ನು ಕಾಪಾಡಲು ಕಾಂಗ್ರೆಸ್ ಸರ್ಕಾರ ವರ್ತಿಸಿದ ರೀತಿಯನ್ನು ನಾವು ಕಂಡಿದ್ದೇವೆ.

9. ವಂಚನೆ, ಹಗರಣ ಮತ್ತು ಭ್ರಷ್ಟಾಚಾರವು ಈ ಸರ್ಕಾರದ ಲಾಂಛನವಾಗಿದ್ದು, ನಿರಂತರವಾಗಿ ಹೊಸ ಹಗರಣಗಳು ಬೆಳಕಿಗೆ ಬರುತ್ತಿದ್ದು, ಸರ್ಕಾರದ ಆದಾಯದ ಮೇಲೆ ಆಘಾತ ಮಾಡುತ್ತಿವೆ. ಸ್ವಾತಂತ್ರ್ಯಾನಂತರದ ಅತಿ ಭ್ರಷ್ಟ ಸರ್ಕಾರ ಇದಾಗಿದೆ. ಈ ಪ್ರಕರಣದ ಕುರಿತು, ಭಾಜಪ ಸದನದ ಒಳಗೂ ಮತ್ತು ಹೊರಗೂ ಧ್ವನಿಯೆತ್ತಲಿದ್ದು ಪ್ರಧಾನಿಗಳು, ಸೋನಿಯ ಗಾಂಧಿ ಹಾಗೂ ರಕ್ಷಣಾ ಸಚಿವರ ಉತ್ತರದಾಯಿತ್ವದ ಪ್ರಶ್ನೆಯನ್ನು ಎತ್ತುತ್ತೇವೆ. ಇಡೀ ಹೆಲಿಕಾಪ್ಟರ್ ವ್ಯವಹಾರವನ್ನು ಸ್ಥಗಿತಗೊಳಿಸಿ, ಅದರ ಸಮೀಕ್ಷೆ ನಡೆಯಬೇಕು ಎಂದೂ ಸಹ ಭಾಜಪ ಆಗ್ರಹಿಸುತ್ತದೆ.

10. ಎಲ್ಲಕ್ಕಿಂತ ಮುಖ್ಯವಾಗಿ, ಇಟಲಿಯ ತನಿಖಾ ಸಂಸ್ಥೆಯು ಭಾರಿ ಕಮಿಶನ್ ನೀಡಲಾಯಿತು ಎಂದು ಒಪ್ಪಿರುವಾಗ, ಇಲ್ಲಿ ಕಮಿಶನ್ ಹಾಗೂ ಲಂಚವನ್ನು ಪಡೆದವರು ಯಾರು ಎಂಬ ಸತ್ಯವನ್ನು ಈ ದೇಶ ಅರಿಯಬೇಕಾಗಿದೆ.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ